www.previouspapers.co.in

# SPECIMEN

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

**K-I** | **2011** | ವರ್ಷನ್ ಕೋಡ್ **E**

## ಪ್ರಶ್ನೆ ಪುಸ್ತಿಕೆ
## ಕನ್ನಡ ಭಾಷೆ

ಗರಿಷ್ಠ ಸಮಯ : 2 ಗಂಟೆಗಳು | ಗರಿಷ್ಠ ಅಂಕಗಳು : 150

**ಸೂಚನೆಗಳು :**

1. OMR ಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಎನ್ ಕೋಡ್ ಮಾಡುವ ಮೊದಲು ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ **A, B, C, D....** ಅಥವಾ **H** ಅನ್ನು ಓಎಮ್‌ಆರ್ ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ |
|---|
| |

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ **ಅತ್ಯುತ್ತಮವೆನಿಸುವ ಉತ್ತರಕ್ಕೆ** ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು **ಕೇವಲ ಒಂದು ಉತ್ತರವನ್ನು** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಪತ್ರಿಕೆಯ ಮೇಲೆ ಕೇವಲ **ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ** ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೂ** ಉತ್ತರಿಸಿರಿ. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು **ನೋಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್** ಇತ್ಯಾದಿಗಳನ್ನು (ನಿಮ್ಮ ಸಹಿ ಹಾಗೂ ಸಂವೀಕ್ಷಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತುಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

Note: The Inforamation provided here is Only fore Reference. It may Vary the Original.

www.previouspapers.co.in

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 1–6) ಗೆರೆ ಎಳೆದ ಭಾಗದಲ್ಲಿ ಕೊಡಲಾದ ರೂಪಕ್ಕೆ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.

**ಉದಾಹರಣೆ :** ಹೆದ್ದಾರಿಯಲ್ಲಿ ಬಸ್ಸೊಂದು ಆಕ್ಸಿಡೆಂಟಿಗೊಳಗಾಯಿತು.

(1) ವಿಪತ್ತು (2) ಅಪಘಾತ
(3) ಪ್ರಮಾದ (4) ಆಕಸ್ಮಾತ್

ಇಲ್ಲಿ 'ಅಪಘಾತ' ಎಂಬುದು ಸೂಕ್ತ ರೂಪವಾದುದರಿಂದ (2)ಅನ್ನು ಗುರುತಿಸಬೇಕು.

1. ಅವನಿಗೆ ಆಟದ ಪಂದ್ಯದಲ್ಲಿ ಹಲವು ಮೆಡಲ್‌ಗಳು ಬಂದಿವೆ.
(1) ಬಹುಮಾನ (2) ಪಾರಿತೋಷಕ
(3) ಪದಕ (4) ಪ್ರಶಸ್ತಿ ಫಲಕ

2. ರೈಲು ಪಯಣಕ್ಕೆ ರಿಜರ್ವೇಷನ್ ಮಾಡುವುದು ಒಳ್ಳೆಯದು.
(1) ಪ್ರಯಾಣ ಚೀಟಿ
(2) ಆಲೋಚನೆ
(3) ವಿಚಾರಿಸುವುದು
(4) ಕಾದಿರಿಸುವಿಕೆ

3. ವಿಶ್ವವಿದ್ಯಾಲಯದ ವ್ಯವಹಾರಕ್ಕೆ ರಿಜಿಸ್ಟ್ರಾರ್‌ಗೆ ಬರೆದುಕೊಳ್ಳಬೇಕು.
(1) ಕುಲ ಸಚಿವ
(2) ಕುಲಪತಿ
(3) ನೋಂದಣಿ ಅಧಿಕಾರಿ
(4) ಕುಲಾಧಿಪತಿ

4. ವಿಮಾನವನ್ನು ಪೈಲಟ್ ನಡೆಸುತ್ತಾನೆ.
(1) ಮುಂಚೂಣಿ ಅಧಿಕಾರಿ
(2) ವಿಮಾನ ಚಾಲಕ
(3) ವಿಮಾನ ಸೂಚಕ
(4) ವಿಮಾನ ನಿರ್ವಾಹಕ

5. ಮುಖ್ಯಸ್ಥರು ಈಗ ಮೀಟಿಂಗ್‌ನಲ್ಲಿದ್ದಾರೆ.
(1) ಕಾರ್ಯ (2) ಸಭೆ
(3) ಮಾತುಕತೆ (4) ಭೇಟಿ

6. ನಮ್ಮ ಮನೆಯಲ್ಲಿ ಫ್ರಿಡ್ಜ್ ಕೆಟ್ಟು ಹೋಗಿದೆ.
(1) ಆಹಾರ ಶೀತಲ ಯಂತ್ರ
(2) ತಂಗಳನ್ನದ ಪೆಟ್ಟಿಗೆ
(3) ಹವಾ ನಿಯಂತ್ರಕ ಯಂತ್ರ
(4) ವಾತಾನುಕೂಲ ಯಂತ್ರ

**ಸೂಚನೆ :** ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ 7–14) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರುತಿಸಿ.

**ಉದಾಹರಣೆ :** 'ಮಿನ್' ಎಂದರೆ
(1) ಹೊಳೆಯುವ (2) ಮೀಯು
(3) ಮೇಯು (4) ಆಕಾಶ

ಇಲ್ಲಿ 'ಹೊಳೆಯುವ' ಎಂಬುದು 'ಮಿನ್'ನ ಅರ್ಥವನ್ನು ಹೇಳುವ ಪದ ಆದುದರಿಂದ (1)ನ್ನು ಗುರುತಿಸಬೇಕು.

7. 'ಚಾರಣ' ವೆಂದರೆ
(1) ಚಾಮರ
(2) ಸಂಚಾರ
(3) ಚಪ್ಪರ
(4) ಚತುರ



Note: The Inforamation provided here is Only fore Reference. It may Vary the Original.

www.previouspapers.co.in

8. 'ತಂಗದಿರ' ಎಂದರೆ
   (1) ಸೂರ್ಯ
   (2) ಚಂದ್ರ
   (3) ನಕ್ಷತ್ರ
   (4) ಗ್ರಹ

9. 'ಧುರಂಧರ' ಎಂದರೆ
   (1) ಹೊಣೆಗಾರ
   (2) ದೊಡ್ಡಸ್ತಿಕೆ
   (3) ದೇವರು
   (4) ದಾನವರು

10. 'ಬಾದರಾಯಣ ಸಂಬಂಧ' ಎಂದರೆ
   (1) ಕಳೆದು ಹೋದ ಸಂಬಂಧ
   (2) ಹೊಸ ಸಂಬಂಧ
   (3) ಮುರಿದು ಬಿದ್ದ ಸಂಬಂಧ
   (4) ಪ್ರಪ್ರಾಚೀನ ಸಂಬಂಧ

11. 'ಬೆನ್ನೀರು' ಎಂದರೆ
   (1) ಹಿನ್ನೀರು
   (2) ನಿಂತ ನೀರು
   (3) ಬಿಸಿ ನೀರು
   (4) ಬಿಳಿದಾದ ನೀರು

12. 'ಬೋಳೇಶಂಕರ' ಎಂದರೆ
   (1) ಭೋಗಾಭಿಲಾಷೆ ಇಲ್ಲದವನು
   (2) ಮೋಸ ಹೋಗುವವನು
   (3) ಕೈಲಾಸದಲ್ಲಿ ನೆಲಸಿರುವವನು
   (4) ಸರ್ವಾಂತರ್ಯಾಮಿ

13. 'ಅಮೂರ್ತ' ಎಂದರೆ
   (1) ಕೆಟ್ಟ ಮುಹೂರ್ತ
   (2) ಅಮೂಲ್ಯ
   (3) ಆಕಾರವಿರುವ
   (4) ಆಕಾರವಿಲ್ಲದ

14. 'ಒಸಗೆ' ಎಂದರೆ
   (1) ಉತ್ಸವ
   (2) ಒಪ್ಪಂದ
   (3) ಆಹ್ಲಾದ
   (4) ವಿನೋದ

**ಸೂಚನೆ :** ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 15–19) ವಿರುದ್ಧಾರ್ಥಕ ಪದಗಳನ್ನು ಮುಂದೆ ಕೊಟ್ಟ ಪರ್ಯಾಯ ರೂಪಗಳಿಂದ ಆಯ್ದು ಗುರುತಿಸಿ.

**ಉದಾಹರಣ :** ಮುನ್ನುಡಿ
   (1) ಮೊದಲ್ನುಡಿ
   (2) ಒಳ್ನುಡಿ
   (3) ಹಿಮ್ಮಡಿ
   (4) ಹಿನ್ನುಡಿ

ಇಲ್ಲಿ 'ಮುನ್ನುಡಿ'ಗೆ ವಿರುದ್ಧಾರ್ಥಕ ರೂಪ 'ಹಿನ್ನುಡಿ' ಎಂಬುದು. (4)ಅನ್ನು ಗುರುತಿಸಬೇಕು.

15. ಅನನ್ಯ
   (1) ಸಾಮಾನ್ಯ
   (2) ಅಸಹ್ಯ
   (3) ಸಾಜನ್ಯ
   (4) ಅನಾದಿ



Note: The Inforamation provided here is Only fore Reference. It may Vary the Original.

www.previouspapers.co.in

16. ದೊರಗು

(1) ಮುರುಡು

(2) ಒರಟು

(3) ಕೋಮಲ

(4) ಬಿರುಸು

17. ಕೊರತೆ

(1) ಅಗತ್ಯತೆ

(2) ಹೆಚ್ಚಳ

(3) ಅಪೂರ್ಣ

(4) ಅಭಾವ

18. ಅಸ್ತಿತ್ವ

(1) ಅನಾಸ್ತಿತ್ವ

(2) ನಾಸ್ತಿತ್ವ

(3) ಅಸ್ತಿಪಾಯ

(4) ಇರುವು

19. ಉನ್ನತ

(1) ಶ್ರೇಷ್ಠವಿಲ್ಲದ

(2) ಎತ್ತರವಲ್ಲದ

(3) ಅಸಮ್ಮತ

(4) ಅವನತ

ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನೂ (ಪ್ರಶ್ನೆ ಸಂಖ್ಯೆ 20 – 28) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನೂ ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.

ಉದಾಹರಣೆ : 'ಬೆಣ್ಣೆ ಹಚ್ಚು'

(1) ರೊಟ್ಟಿಗೆ ಬೆಣ್ಣೆ ಹಚ್ಚಿ ಕೊಡು

(2) ಮೈಯುಜ್ಜುವುದು

(3) ಹೊಗಳುವುದು

(4) ಸೇವೆ ಮಾಡುವುದು

ಇಲ್ಲಿ (3) ಸರಿಯಾದ ಅರ್ಥ. ಆದುದರಿಂದ (3)ನ್ನು ಗುರುತಿಸಬೇಕು.

20. ಸಂಧ್ಯಾಕಾಲ

(1) ಸಂಜೆಯ ಹೊತ್ತು

(2) ಸುಗ್ಗಿಯ ಕಾಲ

(3) ಸೂರ್ಯ ಮುಳುಗುವ ಹೊತ್ತು

(4) ಇಳಿವಯಸ್ಸು

21. ಬುಡ ಮೇಲು ಮಾಡು

(1) ಆಂದೋಲನ ಮಾಡು

(2) ಕಣ್ಣು ತೆರೆಯುವಂತೆ ಮಾಡು

(3) ಹೊಸ ಅಧ್ಯಾಯ ಆರಂಭಿಸು

(4) ಗಿಡ ಕಿತ್ತು ಹಾಕು

22. ಮೂಲಕ್ಕೆ ಕೈಹಾಕು

(1) ಜೇಬಿಗೆ ಕೈಹಾಕು

(2) ಕಾರಣ ಕೇಳು

(3) ಸಂಬಂಧ ಹುಡುಕು

(4) ಬುಡ ಭದ್ರ ಮಾಡು



Note: The Inforamation provided here is Only fore Reference. It may Vary the Original.

www.previouspapers.co.in

23. ಮಾಡಿದ್ದುಣ್ಣೋ ಮಹಾರಾಯ
(1) ಛಂದೋಬದ್ಧವಾಗಿರು
(2) ಸುಖ ಅನುಭವಿಸು
(3) ಅಡಿಗೆ ರುಚಿ ನೋಡು
(4) ಪರಿಣಾಮ ಅನುಭವಿಸು

24. ದೀಪದ ಕುಡಿ
(1) ವಂಶೋದ್ಧಾರಕ
(2) ಒಳ್ಳೆಯ ಮನೆತನದವ
(3) ದೀಪದ ಬತ್ತಿ
(4) ಬೆಳ್ಳಿಯ ದೀಪ

25. ಸಟ್ಟುಗ ಆಡಿಸು
(1) ಜಗಳ ಹುಟ್ಟಿಸು
(2) ಮಧ್ಯ ಪ್ರವೇಶಿಸು
(3) ಅಡುಗೆ ಮಾಡು
(4) ಊಟ ಬಡಿಸು

26. ಗಾಳಿದೀಪ
(1) ದುರಿತಾವಸ್ಥೆ
(2) ಅಂತ್ಯಾವಸ್ಥೆ
(3) ಹೊಯ್ದಾಡುವ ದೀಪ
(4) ಗಾಳಿ ತುಂಬಿದ ದೀಪ

27. ಛಟ್ಟಿಯಿಳಿಸು
(1) ಬೆರಳಚ್ಚು ಮಾಡು
(2) ಅನುಕರಣ ಮಾಡು
(3) ನಕಲು ತಯಾರಿಸು
(4) ಮಧ್ಯ ತಯಾರಿಸು

28. ಒಂದೇ ದೋಣಿಯಲ್ಲಿರು
(1) ಸಮೀಪದಲ್ಲಿರು
(2) ಬದ್ಧನಾಗಿರು
(3) ತೇಲುತ್ತಿರು
(4) ಅಂತರ್ಗತನಾಗಿರು

**ಸೂಚನೆ :** ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆ ಸಂಖ್ಯೆ 29 – 32) ಗುರುತಿಸಿ.

**ಉದಾಹರಣೆ :** ಒಂದು ಪದ ಉಳಿದವುಗಳ ಗುಂಪಿಗೆ ಸೇರುವುದಿಲ್ಲ ಅಂತಹ ಪದ ಗುರುತಿಸಿ.

(1) ಹುಡುಗ (2) ಹಸು
(3) ಹಕ್ಕಿ (4) ಹಲಸು

ಇಲ್ಲಿ 'ಹಲಸು' ಇತರ ಪದಗಳ ಜಾತಿಗೆ ಸೇರುವುದಿಲ್ಲ. ಆದುದರಿಂದ (4)ಅನ್ನು ಗುರುತಿಸ ಬೇಕು.

29. (1) ಪರಿವರ್ತನೆ (2) ಮಾರ್ಪಾಡು
(3) ಕ್ರಾಂತಿ (4) ಅಗೋಚರ

30. (1) ಮೊಕದ್ದಮೆ
(2) ಆಚರಣೆ
(3) ಕಾನೂನು
(4) ಆರೋಪ

31. (1) ಹುಟ್ಟು (2) ಸಾವು
(3) ಕೊಲ್ಲು (4) ಕೊಲೆ

32. (1) ಕ್ಷಣಿಕ (2) ಯುಗ
(3) ಸ್ಥಳ (4) ಕಾಲ



Note: The Inforamation provided here is Only fore Reference. It may Vary the Original.

www.previouspapers.co.in

ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಗೆರೆಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯ ರೂಪಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ. ತಪ್ಪಿಲ್ಲದಿದ್ದರೆ 'ತಪ್ಪಿಲ್ಲ' ಎಂಬ (4)ನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 33 – 39)

ಉದಾಹರಣೆ : ಕಾಮನ್‌ವೆಲ್ತ್ ಹಗುರಣಕ್ಕೆ ಸಂಬಂಧಿಸಿ ಏಳು ಜನ ಬಂಧನ

(1) ಹಗರಣ (2) ಹಾಗರಣ
(3) ಹಗರನ (4) ಹಗರಾಣ

ಇಲ್ಲಿ ಗೆರೆ ಎಳೆದ 'ಹಗುರಣ' ಪದವು ತಪ್ಪಾಗಿದ್ದು ಆದರ ಸರಿಯಾದ ರೂಪವು 'ಹಗರಣ' ಎಂದಾಗಿದೆ. ಆದುದರಿಂದ (1)ನ್ನು ಗುರುತಿಸಬೇಕು.

33. ನಿಮ್ಮನ್ನು ಸಮಾಜದ ಕನಿಷ್ಟಥಮ ಸ್ಥಾನದಲ್ಲಿರಿಸಿರುವ ಧರ್ಮವೇ ನಿರಂತರವಾದುದು.
(1) ಕನಿಷ್ಟತಮ (2) ಕನಿಷ್ಠಥಮ
(3) ಕನಿಷ್ಠತಮ (4) ತಪ್ಪಿಲ್ಲ

34. ಹಿಂದೆ ವಸಾಹತೀಕರಣದಲ್ಲಿ ಪ್ರಾರಂಭವಾದ ಪ್ರಕ್ರಿಯೆಯೊಂದು ಇನ್ನೂ ವಿನಾಶಕಾರೀ ಪಥದಲ್ಲಿ ಮುಂದುವರಿಯುತ್ತಿದೆ.
(1) ವಸಹತಿಕರಣ
(2) ವಸಹತೀಕರಣ
(3) ವಸಾಹತಿಕರಣ
(4) ತಪ್ಪಿಲ್ಲ

35. ಅಶೋಕನು ಭೌದ್ಧಮತ ಪ್ರಚಾರಕ್ಕಾಗಿ ಎಲ್ಲ ಯತ್ನ ಮಾಡಿದ.
(1) ಬೌದ್ಧಮತ
(2) ಭೌದ್ದಮತ
(3) ಬೌದ್ದಮತ
(4) ತಪ್ಪಿಲ್ಲ

36. ಯಾವುದು ಮನುಷ್ಯನನ್ನು ಆಳುತ್ತದೋ ಅದೇ ಧರ್ಮ
(1) ಯಾವದು
(2) ಯಾವೊದು
(3) ಯಾವುದೋ
(4) ತಪ್ಪಿಲ್ಲ

37. ಈ ನಿಟ್ಟಿನಲ್ಲಿ ಸರ್ಕಾರದ ಸೈದ್ಧಾಂತಿಕ ನಿಲುವು ಸ್ಪಷ್ಟವಾಗಿಲ್ಲ.
(1) ಸಿದ್ಧಾಂತ
(2) ಸೈದ್ದಾಂತ
(3) ಸಿದ್ಧಾಂತಿಕ
(4) ತಪ್ಪಿಲ್ಲ

38. ಗತ ಕಾಲದ ವೈಬವೀಕರಣವು ಎಲ್ಲ ರಾಷ್ಟ್ರೀಯ ಚಳುವಳಿಗಳ ವಿಶಿಷ್ಟ ಲಕ್ಷಣ ಆಗಿದ್ದಿತು.
(1) ವೈಭವಿಕರಣ (2) ವೈಬವಿಕರಣ
(3) ವೈಭವೀಕರಣ (4) ತಪ್ಪಿಲ್ಲ

39. ಒಂದು ಕಲೆಯ ಮೇಲೆ ಪ್ರಭುತ್ವ ಸಾಧಿಸಲು ಆ ಕಲೆಯ ಸಿದ್ಧಾಂತ ಮತ್ತು ಪ್ರಯೋಗಗಳ ಕೂಲಂಕುಶ ಜ್ಞಾನ ಅಗತ್ಯ.
(1) ಕೂಲಂಕುಷ (2) ಕೂಲಂಕಶ
(3) ಕೂಲಂಕಷ (4) ತಪ್ಪಿಲ್ಲ



Note: The Inforamation provided here is Only for Reference. It may Vary the Original.

www.previouspapers.co.in

**ಸೂಚನೆ :** ಕೆಳಗೆ ಖಾಲಿ ಬಿಟ್ಟಿರುವ ಜಾಗಕ್ಕೆ (ಪ್ರಶ್ನೆ ಸಂಖ್ಯೆ 40-67) ಸರಿಯಾದ ಉತ್ತರವನ್ನು ಗುರುತಿಸಿ.

**ಉದಾಹರಣೆ :** 'ತಡೆದಾನು' ಎಂಬುದು ____ ಪದ.

(1) ಭವಿಷ್ಯದರ್ಥಕ

(2) ಇಚ್ಛಾರ್ಥಕ

(3) ಸಂಭಾವನಾರ್ಥಕ

(4) ಪ್ರೇರಣಾರ್ಥಕ

ಇಲ್ಲಿ 'ಸಂಭಾವನಾರ್ಥಕ' ಎಂಬುದು ಸರಿಯಾದ ಉತ್ತರ. ಆದುದರಿಂದ (3) ಅನ್ನು ಗುರುತಿಸಬೇಕು.

**40.** ಕುಡಿಯಿರಿ ಎಂಬುದು _____ ಪದ.

(1) ಸಂಭಾವನಾರ್ಥಕ

(2) ವಿಧ್ಯರ್ಥಕ

(3) ಇಚ್ಛಾರ್ಥಕ

(4) ಸಂದೇಹಾರ್ಥಕ

**41.** _____ ಇದು ಕರ್ತರೀ ರೂಪದ ಕ್ರಿಯಾಪದ.

(1) ತಿನ್ನಲ್ಪಟ್ಟಿತು

(2) ತಿನ್ನಲ್ಪಡುತ್ತದೆ

(3) ತಿಂದೆನು

(4) ತಿನ್ನಲಾಯಿತು

**42.** 'ನೆಗೆದನು' ಎಂಬುದು _____ ಕ್ರಿಯಾಪದ.

(1) ಅಪೂರ್ಣ ವರ್ತಮಾನ

(2) ಪೂರ್ಣ ಭೂತ

(3) ಭೂತ ನಿರಂತರ

(4) ಅಭೂತ

**43.** _____ ಎಂಬುದು ಅವಧಾರಣೆಯಿಂದ ಕೂಡಿದ ಪದ.

(1) ನಾನು

(2) ನಾನೂ

(3) ನಾನೇ

(4) ನಾನೋ

**44.** ಕನ್ನಡ ವಾಕ್ಯಗಳಲ್ಲಿ ವಿಶೇಷಣದ ಸ್ಥಾನ _____.

(1) ನಾಮ ಪದಗಳಿಗಿಂತ ಮೊದಲು

(2) ನಾಮ ಪದಗಳ ನಂತರ

(3) ಕ್ರಿಯಾ ವಿಶೇಷಣದ ಮೊದಲು

(4) ಕ್ರಿಯಾ ವಿಶೇಷಣಗಳ ನಂತರ

**45.** 'ಮೆಲ್ಲಗೆ ತಿಳಿಸಿದನು' ಎಂಬಲ್ಲಿ 'ಮೆಲ್ಲಗೆ' ಎಂಬುದು _____.

(1) ನಾಮಪದ

(2) ವಿಶೇಷಣ

(3) ಕೃದಂತ ವಿಶೇಷಣ

(4) ಕ್ರಿಯಾ ವಿಶೇಷಣ

**46.** 'ಜಟ್ಟಿ ಮಲ್ಲ' ಎಂಬಲ್ಲಿ _____ ಸಮಾಸವಿದೆ.

(1) ಕರ್ಮಧಾರಯ

(2) ಅಂಶೀ

(3) ತತ್ಪುರುಷ

(4) ದ್ವಿಗು

**47.** ಮಂಗಳೂರು ಎಂಬಲ್ಲಿ _____ ವಿದೆ.

(1) ಅರಿ ಸಮಾಸ

(2) ಗಮಕ ಸಮಾಸ

(3) ಕರ್ಮಧಾರಯ ಸಮಾಸ

(4) ಬಹುವ್ರೀಹಿ ಸಮಾಸ



Note: The Inforamation provided here is Only fore Reference. It may Vary the Original.

www.previouspapers.co.in

48. 'ಮಳೆಗಾಲ' ಎಂಬ ಪದದಲ್ಲಿ ________ ಸಂಧಿಯಿದೆ.

(1) ಆಗಮ

(2) ಆದೇಶ

(3) ಲೋಪ

(4) ಸವರ್ಣ ದೀರ್ಘ

49. ಪಡುವಣ ಎಂಬಲ್ಲಿ _____ ಸಂಧಿ ಇದೆ.

(1) ಆಗಮ (2) ಗುಣ

(3) ಲೋಪ (4) ಆದೇಶ

50. 'ಹೊರಮೈ' ಎಂಬುದರ ವಿಗ್ರಹ ರೂಪವು ___.

(1) ಹೊರಗಿನ ಮೈ

(2) ಮೈಯ ಹೊರಗು

(3) ಮೈಯಿಂದ ಹೊರಗೆ

(4) ಮೈಯ ಹೊರಗಿನದು

51. ವಿದ್ಯಾಭ್ಯಾಸ ಎಂಬುದರ ವಿಗ್ರಹ ರೂಪ ___.

(1) ವಿದ್ಯೆಯ ಅಭ್ಯಾಸ

(2) ವಿದ್ಯೆಯಿಂದ ಅಭ್ಯಾಸ

(3) ವಿದ್ಯೆಗೆ ಅಭ್ಯಾಸ

(4) ವಿದ್ಯೆ ಮತ್ತು ಅಭ್ಯಾಸ

52. 'ಹುಂಜ' ಎಂಬುದು _____ ಪದ.

(1) ಪುಲ್ಲಿಂಗ

(2) ಸ್ತ್ರೀಲಿಂಗ

(3) ನಪುಂಸಕಲಿಂಗ

(4) ಉಭಯ ಲಿಂಗ

53. ವಿಮರ್ಶಕ ಎಂಬುದು _____ ವಾಚಕ.

(1) ಪುಲ್ಲಿಂಗ (2) ಸ್ತ್ರೀಲಿಂಗ

(3) ಪುಂಸ್ತ್ರೀಲಿಂಗ (4) ನಪುಂಸಕಲಿಂಗ

54. _____ ಎಂಬುದು ಸರಿಯಾದ ಕಾಗುಣಿತ ರೂಪದ ಪದ.

(1) ವಯಕ್ತಿಕ

(2) ವಯ್ಯಕ್ತಿಕ

(3) ವೈಯಕ್ತಿಕ

(4) ವೈಯ್ಯಕ್ತಿಕ

55. _____ ಇದು ಸರಿಯಾದ ಕಾಗುಣಿತ ರೂಪದ ಪದ.

(1) ಬಾವಾವೇಷ

(2) ಭಾವಾವೇಸ

(3) ಬಾವಾವೇಶ

(4) ಭಾವಾವೇಶ

56. 'ಮಹಾಶೂರನಾದ ಶ್ರೀರಾಮಚಂದ್ರನು ದುಷ್ಟನಾದ ರಾವಣನನ್ನು ತೀಕ್ಷ್ಣವಾದ ಬಾಣಗಳಿಂದ ಕೊಂದನು.' ಈ ವಾಕ್ಯದಲ್ಲಿಯ ಕರ್ತೃಪದವು ___.

(1) ಮಹಾಶೂರನಾದ

(2) ಶ್ರೀರಾಮಚಂದ್ರನು

(3) ರಾವಣನನ್ನು

(4) ಬಾಣಗಳಿಂದ

57. 'ತಿನ್ನುತ್ತಾನೆ' ಎಂಬ ಕ್ರಿಯಾಪದದ ನಿಷೇಧಾರ್ಥಕ ರೂಪವು

(1) ತಿನ್ನುವುದಿಲ್ಲ

(2) ತಿನ್ನಲಿಲ್ಲ

(3) ತಿನ್ನಬೇಡ

(4) ತಿನ್ನದಿರು



Note: The Inforamation provided here is Only for Reference. It may Vary the Original.

www.previouspapers.co.in

58. ಸಕರ್ಮಕ ಕ್ರಿಯಾಪದಕ್ಕೆ ________ ಒಂದು ಉದಾಹರಣೆ.
(1) ಇರು
(2) ಬಾಳು
(3) ಹಾರು
(4) ಹೀರು

59. _____ ಇದೊಂದು ಅನುಕರಣವಾಚಕ ಪದ.
(1) ಡವಗುಡು
(2) ಮರಗುಡು
(3) ಹರಿಹಾಯು
(4) ನೆನೆಗುದಿ

60. 'ಕಂಬಿಕೀಳು' ಎಂಬುದು ಒಂದು _____.
(1) ಗಾದೆಮಾತು
(2) ನುಡಿಗಟ್ಟು
(3) ಸಮಾಸ ಪದ
(4) ಕೃಲ್ಲಿಂಗ ಪದ

61. ____ ಎಂಬುದು ಸರಿಯಾದ ಕ್ರಿಯಾಪದ ರೂಪವಾಗಿದೆ.
(1) ಕಿತ್ತಿದನು
(2) ಕೀಳಿದನು
(3) ಕಿತ್ತನು
(4) ಕಿತ್ತುವುದು

62. ನೆನ್ನೆ ರೈಲಿನಲ್ಲಿ ಊರಿಗೆ ಅವನು ಹೋದನು. ಈ ವಾಕ್ಯದ ಕರ್ತೃ ಪದ
(1) ರೈಲು
(2) ಅವನು
(3) ಊರು
(4) ಹೋದನು

63. ತಾವು _____ ಸರ್ವನಾಮ ಪದ.
(1) ಪುರುಷವಾಚಕ
(2) ಆತ್ಮಾರ್ಥಕ
(3) ಉತ್ತಮಪುರುಷ
(4) ಸಂಬಂಧವಾಚಕ

64. ಕಾಡಿಲ್ಲ ಎಂಬ ಪದದಲ್ಲಿ _____ ಸಂಧಿಯಿದೆ.
(1) ಲೋಪ
(2) ಆಗಮ
(3) ಆದೇಶ
(4) ವ್ಯಂಜನ ಸಂಧಿ

65. ಹೋಗ ಕೂಡದು ಎಂಬುದು ________ ಕ್ರಿಯಾಪದ.
(1) ನಿಷೇಧಾರ್ಥಕ
(2) ಪ್ರತಿಷೇಧಾರ್ಥಕ
(3) ನಿಶ್ಚಯಾರ್ಥಕ
(4) ಪ್ರಶ್ನಾರ್ಥಕ

66. 'ದಿಟವಾಗಿ ಮುಖವಿದು ಭೂಮಿಗೆ ಬಿದ್ದ ಚಂದ್ರ ಬಿಂಬ'. ಈ ವಾಕ್ಯದಲ್ಲಿರುವ ಅಲಂಕಾರವು ___.
(1) ಉಪಮೆ
(2) ರೂಪಕ
(3) ಉತ್ಪ್ರೇಕ್ಷೆ
(4) ದೀಪಕ

67. ಚಂದ್ರಮುಖಿ ಎಂಬಲ್ಲಿ _____ ಸಮಾಸವಿದೆ.
(1) ಅರಿಸಮಾಸ
(2) ಗಮಕ ಸಮಾಸ
(3) ಕರ್ಮಧಾರಯ
(4) ಬಹುವ್ರೀಹಿ



Note: The Inforamation provided here is Only fore Reference. It may Vary the Original.

www.previouspapers.co.in

ಸೂಚನೆ : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 68 – 73) (1), (2), (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರುತಿಸಿ. ಯಾವ ಭಾಗದಲ್ಲಿಯೂ ದೋಷವಿಲ್ಲದಿದ್ದರೆ 'ತಪ್ಪಿಲ್ಲ' ಎಂಬ (4)ನೇ ಭಾಗವನ್ನು ಗುರುತಿಸಿ.

ಉದಾಹರಣೆ : ಸಂಜೆವರೆಗೆ ಮೇದ ದನಗಳನ್ನು (1) ಹುಡುಗರು (2) ಹೊಡೆದುಕೊಂಡು ಬಂದವು. (3) ತಪ್ಪಿಲ್ಲ (4)

ಇಲ್ಲಿ ಭಾಗ(3)ರಲ್ಲಿ 'ಬಂದರು' ಎಂದಿರಬೇಕಾಗಿತ್ತು. ಈ ಭಾಗದಲ್ಲಿ ದೋಷವಿರುವುದರಿಂದ ಇಲ್ಲಿ (3) ಗುರುತಿಸಬೇಕು.

68. ಅವನು (1) ಅಧಿಕಾರಿಗಳನ್ನು (2) ಲಂಚ ಕೊಟ್ಟಿರಲಿಲ್ಲ. (3) ತಪ್ಪಿಲ್ಲ (4)

69. ಬೇಲೂರು ಕರ್ನಾಟಕದ (1) ಪ್ರಸಿದ್ಧ (2) ವಾಸ್ತುಶಿಲ್ಪ ಕೇಂದ್ರ, (3) ತಪ್ಪಿಲ್ಲ (4)

70. ನಿಮ್ಮಲ್ಲಿ (1) ಅರಮನೆಯನ್ನು (2) ನೋಡದವರು (3) ಯಾರು ? ತಪ್ಪಿಲ್ಲ (4)

71. ಕರ್ನಾಟಕದಲ್ಲಿ (1) ಒಟ್ಟು ಇಪ್ಪತ್ತೊಂಬತ್ತು (2) ಜಿಲ್ಲೆಗಳಿವೆ. (3) ತಪ್ಪಿಲ್ಲ (4)

72. ಭಾಷೆಯ ಬಳಕೆಯ ದೃಷ್ಟಿಯಿಂದ (1) ಪತ್ರಿಕಾ ಬರಹಗಳು (2) ಅಧ್ಯಯನ ಯೋಗ್ಯ (3) . ತಪ್ಪಿಲ್ಲ (4)

73. ಅನಿರುದ್ಧ (1) , ಅನಂದನ ಕಥೆ ಹೇಳಲು (2) ತೊಡಗಿಸಿದ. (3) ತಪ್ಪಿಲ್ಲ (4)

ಸೂಚನೆ : ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 74-79) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ ಅವುಗಳ ಅನುಕ್ರಮವನ್ನು ಗುರುತಿಸಿ.

ಉದಾಹರಣೆ :

ರಾಮನು (P) ಬಂದನು (Q) ಊರಿಂದ (R) ನಿನ್ನೆ (S)

(1) SRQP (2) PQRS
(3) SPRQ (4) QRSP

ಇಲ್ಲಿ SPRQ ಎಂಬುದು ಸರಿಯಾದ ಜೋಡಣೆಯ ಕ್ರಮ. ಆದುದರಿಂದ ಇಲ್ಲಿ (3) ಅನ್ನು ಗುರುತಿಸಬೇಕು.

74. ತಪಸ್ಸು ಮಾಡುವುದಕ್ಕೆ (P) ಬಾರದು (Q) ನನಗೆ (R) ಮನಸ್ಸು (S)

(1) RQSP (2) SQRP
(3) QSRP (4) RPSQ



Note: The Informaation provided here is Only fore Reference. It may Vary the Original.

www.previouspapers.co.in

75. ಗಾನಯೋಗಿ (P) ಎಂಬ (Q) ಅವರಿಗೆ (R) ಬಿರುದು ಇದೆ (S)

(1) RSPQ (2) PQSR
(3) RPQS (4) PQRS

76. ಕೆಮ್ಮಣ್ಣುಗುಂಡಿ (P) ಪ್ರಸಿದ್ಧ (Q) ಕರ್ನಾಟಕದ (R) ಗಿರಿಧಾಮ (S)

(1) RSQP (2) RSPQ
(3) PRQS (4) PQRS

77. ಮೈಸೂರಿನ (P) ಒಡೆಯರು (Q) ಕಾಪಾಡಿದವರು (R) ಜನರ ಹಿತಾಸಕ್ತಿಗಳನ್ನು (S)

(1) PQSR (2) PQRS
(3) QRSP (4) RPQS

78. ರಾಜಕಾರಣಿಗಳು (P) ಮಾತನಾಡಿದರು (Q) ಬಡವರ (R) ಉದ್ಧಾರದ ಬಗ್ಗೆ (S)

(1) PSQR (2) PRSQ
(3) RSQP (4) PQRS

79. ಕಸ್ತೂರಿಯ (P) ವಾಸನೆಯನ್ನು (Q) ಬಲ್ಲದೆ (R) ಕತ್ತೆ (S)

(1) SPQR (2) SQPR
(3) RQPS (4) SRQP

**ಸೂಚನೆ :** ಕೆಳಗಿನವುಗಳಲ್ಲಿ (ಪ್ರಶ್ನೆ ಸಂಖ್ಯೆ 80 – 83) ಗೆರೆಹಾಕಿದ ಭಾಗಗಳು ತಪ್ಪಾಗಿವೆ. ಅವುಗಳಿಗೆ ಮುಂದೆ ಕೊಟ್ಟ ನಾಲ್ಕು ಪರ್ಯಾಯ ರೂಪಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ.

**ಉದಾಹರಣೆ :** ಕುವೆಂಪು ಗೊಲ್ಗೋಥಾ ಎಂಬ ಖಂಡ ಕಾವ್ಯವನ್ನು ರಚಿಸಿದ್ದಾರೆ.

(1) ಮಹಾಯಾತ್ರೆ (2) ಚಿತ್ರಾಂಗದಾ
(3) ಅಹಲ್ಯೆ (4) ಸಾವಿತ್ರಿ

ಇಲ್ಲಿ ಚಿತ್ರಾಂಗದಾ ಸರಿಯಾದ ಉತ್ತರ. ಆದುದರಿಂದ (2)ಅನ್ನು ಗುರುತಿಸಬೇಕು.

80. ನಿರಂಜನರ ಕತೆಗಳಲ್ಲೊಂದು ಧನ್ವಂತರಿಯ ಚಿಕಿತ್ಸೆ
(1) ನಾನು ಕೊಂದ ಹುಡುಗಿ
(2) ಕೊನೆಯ ಗಿರಾಕಿ
(3) ಕ್ಲಿಪ್ ಜಾಯಿಂಟ್
(4) ರಂಗಪ್ಪನ ದೀಪಾವಳಿ

81. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಬಂಡಾಯ ಕಾವ್ಯ ಪರಂಪರೆಗೆ ಸೇರಿದ ಕವಿ.
(1) ಸುಬ್ರಾಯ ಚೊಕ್ಕಾಡಿ
(2) ಸತ್ಯ ನಾರಾಯಣ ರಾವ್ ಅಣತಿ
(3) ಕೆ.ವಿ. ತಿರುಮಲೇಶ್
(4) ಚಂದ್ರಶೇಖರ ಪಾಟೀಲ

82. ಪಂಪನ ಆಶ್ರಯದಾತ ಅಗ್ನಿರಾಜ.
(1) ಅಪರಾದಿತ್ಯ
(2) ಅಮೋಘ ವರ್ಷ
(3) ಅರಿಕೇಸರಿ
(4) ಆದಿದೇವ

83. ಕರ್ನಾಟಕ ಕವಿಚರಿತೆಯನ್ನು ರಚಿಸಿದವರು ಪಂಜೆ ಮಂಗೇಶರಾವ್.
(1) ತ. ಸು. ಶಾಮರಾಯರು
(2) ರಂ. ಶ್ರೀ. ಮುಗಳಿ
(3) ಆರ್. ನರಸಿಂಹಾಚಾರ್
(4) ಡಿ.ಎಲ್. ನರಸಿಂಹಾಚಾರ್



Note: The Inforamation provided here is Only fore Reference. It may Vary the Original.

www.previouspapers.co.in

ಸೂಚನೆ : ಈ ಕೆಳಗೆ (ಪ್ರಶ್ನೆ ಸಂಖ್ಯೆ 84 – 88) PQRS ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.

ಉದಾಹರಣೆ :

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಬತ್ತನೆಯ ಶತಮಾನದಲ್ಲಿ ಕರ್ನಾಟಕ ಅಥವಾ ಕನ್ನಡ ನಾಡು ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿದ್ದಿತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) QSRP (2) SRQP
(3) PQRS (4) RPQS

ಇಲ್ಲಿ ಸರಿಯಾದ ಉತ್ತರ QSRP ಆದುದರಿಂದ (1)ಅನ್ನು ಗುರುತಿಸಿ ಬೇಕು.

**84.** P. ಆದರೆ ಕಾರ್ಯನಿಮಿತ್ತ ಬಹಳಷ್ಟು ಕಾಲ ಆವನು ಪ್ರಯಾಣದಲ್ಲಿರಬೇಕಾಗಿತ್ತು.

Q. ಹಾಗೆ ಹೊರಗೆ ಹೋಗುವಾಗ ಮನೆಯನ್ನು ನೋಡಿಕೊಳ್ಳುವಂತೆ ಮನೆಯಾಳುಗಳಿಗೆ ಒಪ್ಪಿಸಿ ಹೋಗುತ್ತಿದ್ದ.

R. ಹೀಗಾಗಿ ಹಲವಾರು ದಿನಗಳು ಮನೆಯಿಂದ ದೂರವೇ ಉಳಿಯುತ್ತಿದ್ದ.

S. ಹಿಂದೆ ದಯಾಳುವೂ, ವಿವೇಕಿಯೂ ಆದ ವ್ಯಕ್ತಿಯು ತಾನು ಕಟ್ಟಿಸಿಕೊಂಡಿದ್ದ ಬಹು ದೊಡ್ಡ ಬಂಗಲೆಯಲ್ಲಿ ವಾಸಿಸುತ್ತಿದ್ದ.

(1) PRSQ (2) SQRP
(3) SRQP (4) SPRQ

**85.** P. ಆದರೆ ಇದನ್ನು ಹೆಂಡತಿಯ ಮುಂದೆ ಆಗಲಿ, ಸ್ನೇಹಿತರ ಮುಂದೆ ಆಗಲಿ ಹೇಳಿಕೊಂಡಿರಲಿಲ್ಲ.

Q. ಹೀಗಾಗಿ ತನ್ನಷ್ಟಕ್ಕೆ ಸಮಾಧಾನ ಮಾಡಿಕೊಳ್ಳುತ್ತಿದ್ದ.

R. ಹಲವು ದಿವಸಗಳಿಂದ ಒಂದು ಸಂಶಯ ಕಮಲಾಕರನ ಮನಸ್ಸು ಕೊರೆಯುತ್ತಿತ್ತು.

S. ಏಕೆಂದರೆ ಈ ಸಂಶಯ ಹಾಸ್ಯಾಸ್ಪದ ವಾಗಿತ್ತು.

(1) RSQP
(2) RQSP
(3) RPSQ
(4) RQPS

**86.** P. ಸಾವಿರಾರು ವರ್ಷಗಳ ಹಿಂದೆ ಒಬ್ಬ ವ್ಯಕ್ತಿಯು ಪ್ರಕೃತಿಯ ನಿಗೂಢತೆಯನ್ನು ಕುರಿತಂತೆ ಗಾಢವಾಗಿ ಚಿಂತನೆಮಾಡ ತೊಡಗಿದ.

Q. ಅದನ್ನು ಕುರಿತು ಜ್ಞಾನವನ್ನು ಅವನು ಸಂಪಾದಿಸಿಕೊಂಡ.

R. ಹಾಗೆ ಮಾಡುತ್ತ ವಿಶ್ಲೇಷಿಸುತ್ತಾ ಇರುವಾಗ ಬೆಂಕಿಯು ಉದ್ದೇಶಪೂರ್ವಕ ವಲ್ಲದ ಉತ್ಪತ್ತಿಯಾಗಿ ಕಾಣಿಸಿಕೊಂಡಿತು.

S. ಹಲವಾರು ವರ್ಷಗಳು ಈ ವಿಷಯವನ್ನು ತಲೆಯಲ್ಲಿ ತುಂಬಿಕೊಂಡು ತನಗೆ ತೋಚಿದ ರೀತಿಯಲ್ಲಿ ಲೆಕ್ಕವಿಲ್ಲದಷ್ಟು ಪ್ರಯೋಗಗಳನ್ನು ಮಾಡಿದ.

(1) PSRQ
(2) PQSR
(3) SPRQ
(4) PRSQ



Note: The Information provided here is Only fore Reference. It may Vary the Original.

www.previouspapers.co.in

87. P. ಅದನ್ನು ಅವನು ಸದಾ ಪಂಜರದೊಳಗಿಡುತ್ತಿದ್ದ.

Q. ಪಂಜರದೊಳಗೆ ಬಂದಿಯಾಗಿದ್ದ ಹಕ್ಕಿಯು ತಾಯ್ನಾಡಿನಿಂದ ತನಗಿಷ್ಟವಾದ ಏನನ್ನಾದರೂ ಒಯ್ಯಬಹುದೇ ಎಂಬುದನ್ನು ತಿಳಿದುಕೊಳ್ಳಲು ಇಚ್ಛಿಸಿತು.

R. ಒಮ್ಮೆ ಆ ವ್ಯಾಪಾರಿಯು ಭಾರತ ದೇಶದ ಪ್ರಯಾಣವನ್ನು ಕೈಕೊಳ್ಳಬೇಕಾಗಿ ಬಂತು.

S. ವ್ಯಾಪಾರಿಯೊಬ್ಬನು ಭಾರತ ದೇಶದ ಹಕ್ಕಿಯೊಂದನ್ನು ಸಾಕಿದ್ದನು

(1) SPQR (2) SPRQ

(3) QRSP (4) PQSR

88. P. ಯಾವುದೋ ವಿಚಾರದಲ್ಲಿ ಮುಳುಗಿದ್ದ ಅವನು ಚಕಿತನಾದ.

Q. ಪಕ್ಕದ ಗಲ್ಲಿಯಿಂದ ಹೋರಿಯೊಂದು ಜಿಗಿಯುತ್ತಾ ಬಂತು.

R. ಕೂಸನ್ನು ತಕ್ಷಣ ಎದೆಗವಚಿಕೊಂಡ.

S. ಅಷ್ಟರಲ್ಲಿ ಹೋರಿ ಇನ್ನೊಂದು ಗಲ್ಲಿಯತ್ತ ಹೊರಳಿತು.

(1) QPRS

(2) QPSR

(3) PSQR

(4) PQRS

ಸೂಚನೆ : ಕೆಳಗಿನ ವಾಕ್ಯಗಳನ್ನು (ಪ್ರಶ್ನೆ ಸಂಖ್ಯೆ 89 – 93) ಓದಿ ಅರ್ಥೈಸಿಕೊಂಡು ಮುಂದೆ ಕೊಡಲಾದ ನಾಲ್ಕು ಪರ್ಯಾಯ ವಾಕ್ಯಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.

ಪುಲಿಕೇಶಿಯ ತಂದೆ ಕೀರ್ತಿವರ್ಮನು ಮಡಿದಾಗ, ಅವನು ಚಿಕ್ಕವನಾದುದರಿಂದ ಅವನ ಚಿಕ್ಕಪ್ಪ ಮಂಗಲೇಶನು ರಾಜನಾದನು. ಆದರೆ ಪುಲಿಕೇಶಿಯು ದೊಡ್ಡವನಾಗಿ ರಾಜನಾಗುವ ಶಕ್ತಿ ಸಾಮರ್ಥ್ಯಗಳನ್ನು ಪಡೆದರೂ ಮಂಗಲೇಶನು ಸ್ವಾರ್ಥದಿಂದ ತನ್ನ ಮಗನನ್ನು ಪಟ್ಟಕ್ಕೆ ತರುವ ಹುನ್ನಾರ ಮಾಡಿದುದರಿಂದ ಕುಪಿತನಾದ ಪುಲಿಕೇಶಿಯು ಚಿಕ್ಕಪ್ಪನನ್ನು ಅಡಗಿಸಿ ಕ್ರಿ.ಶ. 610 ರಲ್ಲಿ ಸಿಂಹಾಸನವನ್ನು ಏರಿದನು. ಅವನ ಕಾಲದಲ್ಲಿ ಕನೋಜಿನಲ್ಲಿ ಹರ್ಷವರ್ಧನನೆಂಬ ಚಕ್ರವರ್ತಿಯು ಉತ್ತರದಲ್ಲಿ ಮೆರೆಯುತ್ತಿದ್ದನು. ಅವನು ಪುಲಿಕೇಶಿಯನ್ನು ಲೆಕ್ಕಿಸದೆ ದಂಡೆತ್ತಿ ಬಂದಾಗ ಪುಲಿಕೇಶಿಯು ಅವನನ್ನು ನರ್ಮದೆಯ ದಡದಲ್ಲಿ ನಿರ್ಣಾಯಕವಾಗಿ ಸೋಲಿಸಿ ಹಿಂದಕ್ಕೆ ಅಟ್ಟಿದನು. ಐಹೊಳೆ ಶಾಸನವು 'ಹರ್ಷನು ಪುಲಿಕೇಶಿಯಿಂದ ವಿಗತಹರ್ಷನಾದನು' ಎಂದು ವರ್ಣಿಸುತ್ತದೆ.

ಮುಂದೆ ಪುಲಿಕೇಶಿಯು ಕಳಿಂಗವೆಂಗಿಗಳನ್ನು ವಶಪಡಿಸಿಕೊಂಡುದಲ್ಲದೆ ಕಂಚಿಯ ಪಲ್ಲವ ದೊರೆ ಮಹೇಂದ್ರವರ್ಮನನ್ನೂ ಸೋಲಿಸಿದನು. ಕನ್ನಡ ಚಕ್ರವರ್ತಿಯ ಧ್ವಜ ದಕ್ಷಿಣ ಭಾರತದಲ್ಲೆಲ್ಲ ಹಾರಿದಾಡಿತು ; ವಿಂಧ್ಯದ ಉತ್ತರಕ್ಕೂ ತನ್ನ ಪ್ರಭಾವದ ಛಾಯೆಯನ್ನು ಹಬ್ಬಿಸಿತು. ಕನ್ನಡಿಗರು ಒಂದು ವ್ಯವಸ್ಥಿತ ಆಡಳಿತ, ಸಂಸ್ಕೃತಿಗೆ ಒಳಪಟ್ಟ ಜನತೆಯಾಗಿ ಕರ್ನಾಟಕದ ಹೊರಗೂ ತಮ್ಮ ಖ್ಯಾತಿಯನ್ನು ಬೆಳೆಸಿಕೊಂಡರು.



Note: The Inforamation provided here is Only fore Reference. It may Vary the Original.

www.previouspapers.co.in

ಶೂರರೂ ಸ್ವಾಭಿಮಾನಿಗಳೂ ಆಗಿದ್ದ ಪುಲಿಕೇಶಿಯ ಸೈನಿಕರು ಯುದ್ಧಕ್ಕೆ ಹೋಗುವ ಮುನ್ನ ಅವರ ಹೆಂಡಿರು ಜಯಶೀಲರಾಗಿ ಹಿಂದಕ್ಕೆ ಬರುವಂತೆ ಹಾರೈಸಿ ಕಳಿಸುತ್ತ, ಸೋತು ಹಿಂದಕ್ಕೆ ಬಂದರೆ ಕುಂಕುಮ ಬಳೆಗಳನ್ನು ಉಡುಗೊರೆಯಾಗಿ ಕೊಡುವ ಬೆದರಿಕೆಯನ್ನು ಹಾಕುತ್ತಿದ್ದರು. ಕನ್ನಡಿಗರು ಉಪಕಾರ ಮಾಡಿದವರಿಗೆ ಕೃತಜ್ಞರೂ ಶತ್ರುಗಳ ಬಗ್ಗೆ ಕ್ರೂರಿಗಳೂ ಆಗಿದ್ದಾರೆ.

**89.** (1) ಯುದ್ಧದಲ್ಲಿ ಸೋತ ಹರ್ಷ ಹರ್ಷಚಿತ್ತನಾದನು.

(2) ಪುಲಿಕೇಶಿಯಿಂದ 'ವಿಗತ ಹರ್ಷ' ನೆಂಬ ಬಿರುದನ್ನು ಹರ್ಷ ಪಡೆದನು.

(3) ಪುಲಿಕೇಶಿಯಿಂದ ಯುದ್ಧದಲ್ಲಿ ಸೋತ ಹರ್ಷ ಬಾಳಿನ ಹರ್ಷವನ್ನು ಕಳೆದುಕೊಂಡನು.

(4) ಹರ್ಷನು ಪುಲಿಕೇಶಿಯನ್ನು ಸೋಲಿಸಿ ಹರ್ಷಿತನಾದನು.

**90.** (1) ಕನ್ನಡಿಗರು ಯುದ್ಧ ಸಂಸ್ಕೃತಿಯ ಜನರೆಂದು ಹೆಸರು ಪಡೆದರು.

(2) ಕನ್ನಡಿಗರು ಮಹಾಶೂರರೆಂದು ಕನ್ನಡನಾಡಿನ ಹೊರಗೆ ಹೆಸರು ಪಡೆದರು.

(3) ಕನ್ನಡಿಗರು ಇತರ ದೇಶಗಳಲ್ಲಿ ಹೆದರಿಕೆ ಹುಟ್ಟಿಸಿದರು.

(4) ಕನ್ನಡಿಗರು ಒಳ್ಳೆಯ ಆಡಳಿತಗಾರರೆಂದೂ, ಸುಸಂಸ್ಕೃತರೆಂದೂ ಇಡೀ ದೇಶಕ್ಕೆ ಗೊತ್ತಾಯಿತು.

**91.** (1) ಸೈನಿಕರು ಗೆದ್ದು ಬಂದರೆ ಅವರ ಹೆಂಡಿರು ಅವರಿಗೆ ಬಳೆ ತೊಡಿಸುತ್ತಿದ್ದರು.

(2) ಸೈನಿಕರು ಜಯಶೀಲರಾಗಿ ಬರಬೇಕೆಂದು ಅವರ ಹೆಂಡಿರು ಹಾರೈಸುತ್ತಿದ್ದರು.

(3) ಸೈನಿಕರು ಸೋತು ಬಂದರೆ ಅವರ ಹೆಂಡತಿಯರು ಸಮಾಧಾನ ಪಟ್ಟುಕೊಳ್ಳುತ್ತಿದ್ದರು.

(4) ಸೈನಿಕರು ಸೋತು ಬಂದರೆ ಅವರ ಹೆಂಡತಿಯರು ಉಡುಗೊರೆಗಳನ್ನು ಕೊಡುತ್ತಿದ್ದರು.

**92.** (1) ಮಂಗಲೇಶನು ಪುಲಿಕೇಶಿಗೆ ಮೋಸ ಮಾಡಲು ಪ್ರಯತ್ನಿಸಿದ.

(2) ಮಂಗಲೇಶನು ನ್ಯಾಯವಾಗಿ ಅವನ ಮಗ ಪಟ್ಟಕ್ಕೆ ಬರಬೇಕೆಂದು ತಿಳಿದನು.

(3) ಪುಲಿಕೇಶಿ ಅಪ್ರಬುದ್ಧನಾಗಿದ್ದುದರಿಂದ ಮಂಗಲೇಶ ತನ್ನ ಮಗನಿಗೆ ಪಟ್ಟಕಟ್ಟಲು ಪ್ರಯತ್ನಿಸಿದನು.

(4) ಪುಲಿಕೇಶಿ ರಾಜನಾಗಲು ಬಯಸಲಿಲ್ಲ.

**93.** (1) ಹರ್ಷನು ಇಡೀಭಾರತಕ್ಕೆ ಚಕ್ರವರ್ತಿಯಾಗಿ ಮೆರೆಯುತ್ತಿದ್ದನು.

(2) ಹರ್ಷನು ಉತ್ತರಭಾರತಕ್ಕೆ ಚಕ್ರವರ್ತಿಯಾಗಿ ಮೆರೆಯುತ್ತಿದ್ದ.

(3) ಹರ್ಷನು ಉತ್ತರಭಾರತದ ಚಕ್ರವರ್ತಿಯಾಗಲು ಪುಲಿಕೇಶಿಯ ಮೇಲೆ ದಂಡೆತ್ತಿ ಬಂದ.

(4) ಹರ್ಷನು ಪುಲಿಕೇಶಿಯ ಮೇಲಿನ ದ್ವೇಷದಿಂದ ದಂಡೆತ್ತಿ ಬಂದ.



Note: The Inforamation provided here is Only fore Reference. It may Vary the Original.

www.previouspapers.co.in

ಸೂಚನೆ : ಕೆಳಗಿನ ಪ್ರಶ್ನೆಗಳಲ್ಲಿ (94 – 97) ಕನ್ನಡ ಮೂಲದ್ದು ಅಲ್ಲದ (ಅನ್ಯ ಭಾಷೆಯಿಂದ ಸ್ವೀಕೃತವಾದ) ಶಬ್ದವನ್ನು ಗುರುತಿಸಿ.

ಉದಾಹರಣೆ : (1) ದಾರಿ (2) ಹಾದಿ (3) ರಸ್ತೆ (4) ಕಾಡು - ಈ ನಾಲ್ಕು ಪದಗಳಲ್ಲಿ 'ರಸ್ತೆ' ಮಾತ್ರ ಅನ್ಯ ಭಾಷೆಯಿಂದ ಸ್ವೀಕೃತವಾದ ಪದವಾಗಿದೆ. ಆದುದರಿಂದ ಇಲ್ಲಿ (3) ಅನ್ನು ಗುರುತಿಸಬೇಕು.

**94.** (1) ಸೊಸೆ
(2) ಅತ್ತೆ
(3) ಅಕ್ಕ
(4) ತಂಗಿ

**95.** (1) ಹಣ್ಣು
(2) ತರಕಾರಿ
(3) ಕಾಯಿ
(4) ಹೂವು

**96.** (1) ತಲೆ
(2) ಕೈ
(3) ಕುತ್ತಿಗೆ
(4) ದೇಹ

**97.** (1) ಹೆಂಡತಿ
(2) ಗಂಡಸು
(3) ಆಸಾಮಿ
(4) ತಾಯಿ

ಸೂಚನೆ : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 98-100) ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ. ಆಗ (4)ನ್ನು ಗುರುತಿಸಿ.

ಉದಾಹರಣೆ : ಮೂರ್ಖನೊಬ್ಬ ಧ್ವಜವನ್ನು ತಲೆಕೆಳಗಾಗಿ <u>ಆರಿಸಿದನು</u>.

(1) ಏರಿಸಿದನು
(2) ಹಾರಿಸಿದನು
(3) ತೂರಿಸಿದನು
(4) ಸುಧಾರಣೆ ಬೇಕಿಲ್ಲ

ಇಲ್ಲಿ 'ಆರಿಸಿದನು' ಎಂಬುದು ದೋಷವಾಗಿದ್ದು 'ಹಾರಿಸಿದನು' ಎಂದಿರಬೇಕು. ಆದುದರಿಂದ (2)ಅನ್ನು ಗುರುತಿಸಬೇಕು.

**98.** ಮೂರು ಕಾಸಿನ ಮದುವೆಗೆ ಮುಕ್ಕಾಲಾಣೆ <u>ವಾಲಗ</u>.
(1) ಮೇಳ
(2) ಸಿಂಗಾರ
(3) ಔತಣ
(4) ಸುಧಾರಣೆ ಬೇಕಿಲ್ಲ

**99.** ಹಾಳಾದೋನು <u>ಸಾಯಲು ಬಿಡಿ</u> ಎಂದರು ಅವರು.
(1) ಸಾಯಲಿ ಬಿಡಿ
(2) ಸಾಯಲಿಕ್ಕೆ ಬಿಡಿ
(3) ಸತ್ತುಕೊಳ್ಳಲಿ ಬಿಡಿ
(4) ಸುಧಾರಣೆ ಬೇಕಿಲ್ಲ

**100.** ಹುಡುಗರು ಆ <u>ದನಕ್ಕೆ</u> ಅಟ್ಟಿದರು.
(1) ದನದಲ್ಲಿ (2) ದನವು
(3) ದನವನ್ನು (4) ಸುಧಾರಣೆ ಬೇಕಿಲ್ಲ



Note: The Inforamation provided here is Only fore Reference. It may Vary the Original